ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	698
ಸದಸ್ಯರ ಹೆಸರು	:	ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	22/02/2022
ಉತ್ತರಿಸುವ ಸಚಿವರು	:	ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿರುವ ಪ್ರತಿ ಅಂಗನವಾಡಿಗೆ ನೀಡಲಾಗುತ್ತಿರುವ "ಮೊಟ್ಟೆ" ಗಳ ಸಂಖ್ಯೆಯೆಷ್ಟು; (ಜಿಲ್ಲಾವಾರು ವಿವರ ನೀಡುವುದು)	ರಾಜ್ಯದಲ್ಲಿರುವ ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ನೊಂದಾಯಿಸಲ್ಪಟ್ಟ ಈ ಕೆಳಕಂಡ ಫಲಾನುಭವಿಗಳಿಗೆ ಕೆಳಕಂಡಂತೆ ಕೋಳಿ "ಮೊಟ್ಟೆ" ನೀಡಲಾಗುತ್ತಿದೆ. 1. 3 ವರ್ಷದಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಕೋಳಿ ಮೊಟ್ಟೆಗಳು 2. 3 ವರ್ಷದಿಂದ 6 ವರ್ಷದ ತೀವ್ರ ಅಪೌಷ್ಟಿಕ ಮಕ್ಕಳಿಗೆ ಮತ್ತು 5 ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಇಲ್ಲಿಯ ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆಗಳು 3. 6 ತಿಂಗಳಿಂದ 3 ವರ್ಷದ ತೀವ್ರ ಅಪೌಷ್ಟಿಕ ಮಕ್ಕಳಿಗೆ ಮತ್ತು 5 ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಇಲ್ಲಿಯ ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆಗಳು 4. ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ, ಬಾಣಂತಿಯರು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ವಾರದಲ್ಲಿ 6 ದಿನ ಮೊಟ್ಟೆಗಳು ರಾಜ್ಯದ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಜಿಲ್ಲಾವಾರು ಮೊಟ್ಟೆಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.
ಆ.	ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಪ್ರತಿ ತಿಂಗಳು ಎಷ್ಟು "ಮೊಟ್ಟೆ" ಗಳನ್ನು ಖರೀದಿಸಲಾಗುತ್ತಿದೆ:	ರಾಜ್ಯದ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಜನವರಿ–2022ರ ಮಾಹೆಯಲ್ಲಿ 45579983 ಮೊಟ್ಟೆಗಳನ್ನು ಖರೀದಿಸಿ ವಿತರಿಸಲಾಗಿರುತ್ತದೆ.

ಇ.	ಪ್ರತಿ "ಮೊಟ್ಟೆ"ಗೆ ಸರ್ಕಾರ ನಿಗದಿಪಡಿಸಿರುವ ಹಣವೆಷ್ಟು;	ಪ್ರತಿ ಮೊಟ್ಟೆಗೆ ರೂ.5/- ನ್ನು ನಿಗದಿಪಡಿಸಿದೆ.
ಈ.	ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚು ದರ ಇದ್ದಲ್ಲಿ ಅದನ್ನು ಭರಿಸುವವರು ಯಾರು;	ಗ್ರಾಮೀಣ ಪ್ರದೇಶದಲ್ಲಿ ಕೋಳಿಮೊಟ್ಟೆ ದರವು ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚು ದರ ಇದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ಗ್ರಾಮ ಪಂಚಾಯಿತಿಗಳ ಸ್ವಂತ ಸಂಪನ್ಮೂಲದಿಂದ ಭರಿಸಲು ಸುತ್ತೋಲೆ ಹೊರಡಿಸಲಾಗಿದೆ. ನಗರ ಪ್ರದೇಶಗಳಲ್ಲಿ ಪ್ರತೀ ಮೊಟ್ಟೆಗೆ ರೂ.5/-ರ ದರದಲ್ಲಿಯೇ ಖರೀದಿಸಲಾಗುತ್ತಿದೆ.
ಉ.	ಅಂಗನವಾಡಿ ಕೇಂದ್ರಗಳಿಗೆ "ಮೊಟ್ಟೆ" ಸರಬರಾಜು ಮಾಡುವವರು ಯಾರು; ಮತ್ತು ಅದರ ಜವಾಬ್ದಾರಿಯನ್ನು ಯಾರು ವಹಿಸಿಕೊಂಡಿದ್ದಾರೆ? (ವಿವರ ನೀಡುವುದು)	ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಅಗತ್ಯವಿರುವ ಕೋಳಿಮೊಟ್ಟೆಗಳನ್ನು ಖರೀದಿಸಲು ಅವಶ್ಯವಿರುವ ಹಣವನ್ನು ಬಾಲವಿಕಾಸ ಸಮಿತಿಯ ಜಂಟಿ ಖಾತೆಗೆ ಜಮೆ ಮಾಡಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರು ಸ್ಥಳೀಯವಾಗಿ ಮೊಟ್ಟೆಗಳನ್ನು ಖರೀದಿಸಿ ಫಲಾನುಭವಿಗಳಿಗೆ ವಿತರಿಸುತ್ತಿದ್ದಾರೆ.

ಸಂಖ್ಯೆ: ಮಮಇ 48 ಐಸಿಡಿ 2022

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 698 ಕ್ಕೆ ಒದಗಿಸಲಾದ ಅನುಬಂಧ

ಕ್ರ. ಸಂ.	ಜಿಲ್ಲೆಯ ಹೆಸರು	ತಿಂಗಳಿಗೆ ಬೇಕಾಗುವ ಮೊಟ್ಟೆಗಳ ಸಂಖ್ಯೆ (ಜನವರಿ-2022ರ ಮಾಹೆಯಲ್ಲಿ)
1	ಬಾಗಲಕೋಟೆ	1994993
2	ಬೆಂಗಳೂರು(ಗ್ರಾ)	663855
3	ರಾಮನಗರ	657746
4	ಬೆಂಗಳೂರು(ನ)	2037542
5	ಬೆಳಗಾಂ	4538785
6	ಬಳ್ಳಾರಿ	2788209
7	ಬೀದರ್	1682674
8	ವಿಜಯಪುರ	2462296
9	ಚಾಮರಾಜನಗರ	616664
10	ಚಿಕ್ಕಮಗಳೂರು	684720
11	ಚಿತ್ರದುರ್ಗ	1327204
12	ಮಂಗಳೂರು	1593625
13	ದಾವಣಗೆರೆ	1226286
14	ಧಾರವಾಡ	1414002
15	ಗದಗ	1018475
16	ಕಲ್ಬುರ್ಗಿ	2700634
17	ಯಾದಗಿರಿ	1951380
18	ಹಾಸನ	1020809
19	ಹಾವೇರಿ	1484688
20	ಕೋಲಾರ	1088528
21	ಚಿಕ್ಕಬಳ್ಳಾಪುರ	1006837
22	ಕೊಡಗು	342301
23	ಕೊಪ್ಪಳ	1888857
24	ಮಂಡ್ಯ	1037545
25	ಮೈಸೂರು	1669701
26	ರಾಯಚೂರು	2213524
27	ಶಿವಮೊಗ್ಗ	1140294
28	ತುಮಕೂರು	1647827
29	ಉಡುಪಿ	653831
30	ಉತ್ತರಕನ್ನಡ	1026151
ಒಟ್ಟು		**45579983**